ಓ ಎಸ್ ನಂ:53/2016
ಡಿ ಡಬ್ಲ್ಯೂ:2

**ದಿನಾಂಕ: 01.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು**

**ಪಾಟೀ ಸವಾಲು: ಶ್ರೀ ಎನ್ ಟಿ ಎಸ್., ವಾದಿ ಪರ ವಕೀಲರಿಂದ**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ವಾದಿಯು ಪಾಪಣ್ಣರವರ ವಿರುದ್ಧ ಈ ದಾವೆಯನ್ನು ಜಮೀನಿನ ವಿಚಾರವಾಗಿ ಸಲ್ಲಿಸಿರುತ್ತಾರೆ. ವಾದಿಯು ಬೊಮ್ಮಜ್ಜರವರು ತನಗೆ ಉಯಿಲು ಬರೆದಿರುತ್ತಾರೆ ಎಂದು ಈ ದಾವೆ ಸಲ್ಲಿಸಿರುತ್ತಾರೆ. 1 ನೇ ಪ್ರತಿವಾದಿ ನನ್ನ ಹೆಂಡತಿಯ ಅಕ್ಕನ ಮಗಳು. 2 ಮತ್ತು 3 ನೇ ಪ್ರತಿವಾದಿ ನನ್ನ ಮೊಮ್ಮಕ್ಕಳು. 4 ನೇ ಪ್ರತಿವಾದಿ ನನ್ನ ಅತ್ತೆ. 5 ನೇ ಪ್ರತಿವಾದಿ ನನ್ನ ಅಳಿಯ ಅಂದರೆ ನನ್ನ ಮಗಳ ಗಂಡ. 6 ರಿಂದ 8 ನೇ ಪ್ರತಿವಾದಿಗಳು ನನ್ನ ಅಳಿಯಂದಿರು. ನನ್ನ ಹೆಂಡತಿಯ ಹೆಸರು ಪಾಪಕ್ಕ. ಬೊಮ್ಮಯ್ಯನ ಮಗ ರಾಮಚಂದ್ರಪ್ಪ ಎಂದರೆ ಸರಿ. ನನ್ನ ಹೆಂಡತಿ ಪಾಪಕ್ಕ, ಈರಮ್ಮ ಹಾಗೂ ಜಗಳೂರಮ್ಮರವರು 1 ರಿಂದ 8 ನೇ ಪ್ರತಿವಾದಿಗಳ ವಿರುದ್ಧ ಪಾಲು ವಿಭಾಗ ಕೋರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್.136/2020 ರಂತೆ ದಾವೆಯನ್ನು



ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿಯರನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದಿರಿ ದಾವೆಯಲ್ಲಿ ಅವಶ್ಯಕ ಪಕ್ಷಗಾರರಾಗಿ ಸೇರ್ಪಡೆಗೊಂಡ ನಂತರ ನನ್ನ ಹೆಂಡತಿ ನನ್ನ ಹೆಂಡತಿ ಪಾಪಕ್ಕ, ಈರಮ್ಮ ಹಾಗೂ ಜಗಳೂರಮ್ಮರವರು ಸದರಿ ದಾವೆಯನ್ನು ವಾಪಸ್ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಈ ದಾವೆಯನ್ನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಓ.ಎಸ್.136/2020 ರ ದಾವೆಯನ್ನು ಸಲ್ಲಿಸಲಾಗಿತ್ತು ಎಂದರೆ ಸರಿ.

4 ನೇ ಪ್ರತಿವಾದಿಯ ಗಂಡನೊಂದಿಗೆ ನಾನು ಮುಂಚೆ ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ರಾಮಚಂದ್ರಪ್ಪ ಹಾಗೂ ನಾನು ಚಿತ್ರದುರ್ಗದಲ್ಲಿ ವಾಸ ಇದ್ದೇವು ಎಂದರೆ ಸರಿ. ವಾದಿಗೆ ವೀರೇಶನೊಂದಿಗೆ ಹೆಣ್ಣು ನೋಡಲು ಹೋಗಿದ್ದೇವು ಎಂದರೆ ಸರಿ. ನಾವುಗಳು ಎಲ್ಲರು ಸೇರಿಕೊಂಡು ವಾದಿಯನ್ನು ವೀರೇಶನೊಂದಿಗೆ ಮದುವೆ ಮಾಡಿರುತ್ತೇವೆ ಎಂದರೆ ಸರಿ.

ವಾದಿಗೆ 2 ರಿಂದ 4 ನೇ ವಾದಿಗಳು ಮಕ್ಕಳು ಎಂದರೆ ಸರಿ. ಚಿತ್ರದುರ್ಗದಲ್ಲಿರುವ ರಾಮಚಂದ್ರಪ್ಪನ ಮನೆಯನ್ನು ಮಾರಾಟ ಮಾಡಿ ವಾದಿ ಮತ್ತು ಆಕೆಯ ಗಂಡ ಚಳ್ಳಕೆರೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಆ ಸಮಯದಲ್ಲಿ ಬೊಮ್ಮಯ್ಯರವರು ವಾದಿಯ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ರಾಮಚಂದ್ರಪ್ಪನಿಗೆ ಇಬ್ಬರು ಹೆಂಡತಿಯರಿದ್ದು, ಅವರುಗಳೆಂದರೆ ಸರೋಜಮ್ಮ ಮತ್ತು 4 ನೇ ಪ್ರತಿವಾದಿ. ಸರೋಜಮ್ಮನಿಗೆ 3 ಜನ ಮಕ್ಕಳು ಎಂದರೆ ಸಾಕ್ಷಿಯು ವೀರೇಶಿ ಮತ್ತು ರಾಜೇಶ್ವರಿ ಎಂಬ ಇಬ್ಬರು ಮಕ್ಕಳು ಎಂದು ನುಡಿಯುತ್ತಾರೆ. ವೀರೇಶಿಯವರು ವಾದಿಯನ್ನು ಮದುವೆಯಾದ ನಂತರ ಅಪಘಾತದಲ್ಲಿ ಮೃತರಾಗಿರುತ್ತಾರೆ ಎಂದರೆ ಸರಿ.

ಬೊಮ್ಮಯ್ಯರವರು ಅವರ ಭಾಗದ ಆಸ್ತಿಯನ್ನು ವೀರೇಶಿಯವರಿಗೆ ಉಯಿಲು ಮಾಡಿರುವ ವಿಚಾರ ಇತ್ತೀಚೆಗೆ ಗೊತ್ತಾಗಿರುತ್ತದೆ. ಬೊಮ್ಮಜ್ಜರವರು ದಾವಾ ಷೆಡ್ಯೂಲ್ ಸ್ವತ್ತನ್ನು ವೀರೇಶಿಯವರಿಗೆ ಉಯಿಲು ಮಾಡಿರುತ್ತಾರೆ ಎಂದರೆ ಇತ್ತೀಚೆಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಸಿದ್ದಮ್ಮರವರು ದಾವಾ ಸ್ವತ್ತಿನಲ್ಲಿ 2003 ರಿಂದಲೂ ಸೊಪ್ಪನ್ನು ಬೆಳೆಯುತ್ತಿದ್ದರು ಎಂದರೆ ಸಾಕ್ಷಿಯ ಸೊಪ್ಪು ಬೆಳೆದುಕೊಂಡು ಅಲ್ಲಿಯೇ ವಾಸ ಇದ್ದರು ಎಂದು ನುಡಿಯುತ್ತಾರೆ. ಬೊಮ್ಮಯ್ಯರವರು ಸದರಿ ಮನೆಯನ್ನು ವಾದಿಗೆ ಬಿಟ್ಟುಕೊಟ್ಟಿದ್ದರು ಎಂದರೆ ಸಾಕ್ಷಿಯು ಜಮೀನಿನಲ್ಲಿ 3 ಮನೆಯನ್ನು ಕಟ್ಟಿಸಿದ್ದು, ಅದರಲ್ಲಿ ಒಂದು ಮನೆಯನ್ನು ವಾದಿಗೆ ಬಿಟ್ಟುಕೊಟ್ಟಿದ್ದರು ಎಂದು ನುಡಿಯುತ್ತಾರೆ.

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿರುವ ಅಂಶಗಳನ್ನು 5 ನೇ ಪ್ರತಿವಾದಿ ಹೇಳಿ ಬರೆಸಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿರುವ ಅಂಶಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. 5 ನೇ ಪ್ರತಿವಾದಿ ನನ್ನ ಅಳಿಯನಾಗಿರುವ ಕಾರಣ ಆತ ಸಾಕ್ಷಿ ನುಡಿಯಲು ಹೇಳಿದ್ದರಿಂದ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ.

-5-

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.